ವಿದಿತವಾದಾಗ ಗಂಡನೊಂದಿಗೆ ಮಾತಾಡಿ ಹಳ್ಳಿಗೆ ಹೋಗುವ ತೀರ್ಮಾನ ಮಾಡಿದಳು. ಮಗ ಸೊಸೆ ಒಂದಿಷ್ಟೂ ವಿಚಲಿತರಾಗದೆ, 'ಆಗಬಹುದು, ನಿಮಗೆ ಯಾವುದು ಕಂಫರ್ಟಬಲ್ಲೋ ಹಾಗೇ ಮಾಡಿ. ಎಲ್ಲಿ ಬೇಕೋ ಅಲ್ಲಿರಿ' ಎಂದರು. ತಾವು ಹೋಗುವುದನ್ನೇ ಕಾಯುತ್ತಿರುವಂತಿತ್ತು ಅವರ ವರ್ತನೆ. ತಾವು ಒಂದು ಕಾಲದಲ್ಲಿ ತಮ್ಮದೇ ಪುಟ್ಟ ಸಂಸಾರಕ್ಕೆ ಹಂಬಲಿಸಿದ್ದು ನೆನಪಾಗಿ ತಳ್ಳಂಕವಾಯಿತು. 'ನಿಮ್ಮ ಸಲುವಾಗಿಯೇ ನಾವಿಬ್ಬರು ಕಷ್ಟಪಟ್ಟು ಕಟ್ಟಿಸಿದ ಮನೆ ಬಿಟ್ಟು ಹೊರಟುಹೋಗುತ್ತಿದ್ದೇವೆ' ಎಂದು ಗಟ್ಟಿಯಾಗಿ ಕಿರುಚಿ ಹೇಳಬೇಕೆನಿಸಿದರೂ ಸುನಂದೆ ಹಾಗೆ ಹೇಳಲಿಲ್ಲ. ಮಗ ಸೊಸೆಯನ್ನು ಬೆಂಗಳೂರಿನ ತಮ್ಮ ಮನೆಯಲ್ಲಿ ಬಿಟ್ಟು ತಾವಿಬ್ಬರು ಹಳ್ಳಿಗೆ ಬಂದು ನೆಲೆಯಾಗಿಬಿಟ್ಟರು. ತಿಂಗಳಿಗೊಂದು ವೀಕೆಂಡನ್ನು ಹಳ್ಳಿಯ ಮನೆಯಲ್ಲಿ ತಮ್ಮ ಜೊತೆಯಲ್ಲಿ ಕಳೆಯಲೆಂದು ಬರುತ್ತಿದ್ದುದು ಹಿರಿಯರಾದ ಅಪ್ಪ ಅಮ್ಮಂದಿರನ್ನು ಕಾಣಲೆಂದಲ್ಲ, ಬದಲಾಗಿ ಹಳ್ಳಿಯ ಹೊಳೆ, ತೋಟ, ಗದ್ದೆಗಳ ದಿವ್ಯ ಸಾನ್ನಿಧ್ಯಕ್ಕಾಗಿ, ಆ ಸುಖಕ್ಕಾಗಿ ಅನ್ನುವ ಅನುಮಾನ ಎಷ್ಟೋ ಬಾರಿ ಸುನಂದೆಯನ್ನು ಕಾಡಿದ್ದಿದೆ.

ಅವರನ್ನು ಬಿಟ್ಟು, ತಮ್ಮ ಮನೆಯನ್ನು ಅವರಿಗೆ ಬಿಟ್ಟುಕೊಟ್ಟು ಹಳ್ಳಿಗೆ ಬಂದು ನೆಲೆನಿಂತ ಮೇಲೆ–ತಾವೆಲ್ಲರೂ ಒಟ್ಟಿಗೆ ಇರುವ ಕನಸುಗಳು ಭಗ್ನಗೊಂಡ ವಿಷಣ್ಣತೆಯಾವರಿಸಿತು. ಯಾವುದಕ್ಕೂ ತಲೆ ಕೆಡಿಸಿಕೊಳ್ಳಬೇಡ. ಅವರವರ ಬದುಕು ಅವರದು ಎನ್ನುವ ಗಂಡನ ಮಾತಿನಲ್ಲೂ ಸತ್ಯವಿದೆ ಅನ್ನಿಸಿದರೂ 'ಏನೋ ಸರಿಯಾಗಲಿಲ್ಲ' ಅನ್ನಿಸಲು ಬಹುಕಾಲ ಬೇಕಾಗಲಿಲ್ಲ. ತಾನು ಬೆಳೆಸಿದ ತೆಂಗಿನ ಮರದ ಎಳನೀರು ಸಿಹಿಯಾಗಿಲ್ಲದೆ ಉಪ್ಪಾಗಿದ್ದಂತೆ ಭಾಸವಾಗಿ ಒಳಗೊಳಗೇ ಒರಲೆ ಹತ್ತಿದಂತೆ ಚಡಪಡಿಸುತ್ತಿದ್ದಳು ಸುನಂದೆ.

ವರುಷ ಮೂರಾದರೂ ಮಕ್ಕಳು ಮರಿಯ ಸುದ್ದಿ ಇಲ್ಲದೆ ನಿಸೂರಾಗಿ ಓಡಾಡಿಕೊಂಡಿದ್ದವರನ್ನು ಕಂಡು ಒಳಗುದಿಗೆ ಒಳಗಾಗಿ ಕೇಳಲಾರದೆ ಕೇಳದೇ ಇರಲೂ ಆಗದೆ ಒದ್ದಾಡುತ್ತಿದ್ದಳು. ಒಂದು ಸಾರಿ ಮಗ ಸೊಸೆ ಬಂದಾಗ ಬಹಳ ಕಷ್ಟಪಟ್ಟು ಮಗನನ್ನೇ ಕೇಳಿಬಿಟ್ಟಳು. 'ವಯಸ್ಸು ಮೀರಿ ಹೋಗುತ್ತೆಪ್ಪಾ... ನಿಂಗೀಗಾಗಲೆ ಮೂವತ್ತನಾಲ್ಕಾಯಿತು. ಒಂದು ಹೆತ್ತುಕೊಳ್ಳಿ. ಆಮೇಲೆ ಬೇಡವೆನ್ನಿಸಿದರೆ ಬೇಡವೇ ಬೇಡ. ಅವಳಿಗೂ ಮೂವತ್ತರ ಸಮೀಪ' ಎಂದಾಗ ಗಟ್ಟಿಯಾಗಿ ಸಿಡುಕುತ್ತಾ, 'ಮದುವೆ ಆಗೋವರೆಗೂ ಮದುವೆ ಮದುವೆ ಅಂತೀರ. ಆಮೇಲೆ ಮಕ್ಕಳು ಅಂತ ವರಾತ ತೆಗೀತೀರ. ಸಾಕಾಗಿದೆ ನಮಗಂತು' ಅಂದ. ತಾನೇನು ಹೇಳಬಾರದ್ದು ಹೇಳಿದೆ, ಕೇಳಬಾರದ್ದು ಕೇಳಿದೆ ಅನ್ನುವುದೇ ಗೊತ್ತಾಗದೆ ಗೊಂದಲಗೊಂಡಳು ಸುನಂದೆ. ಅಲ್ಲೇ

